**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಾಮರಾಜನಗರ.**

**ಸಿ.ಸಿ. ನಂ. 268/2023**

**ಚಾಸಾ–2 ಫ್ರಾಸಾ–2**

| | |
|---|---|
| ಸಾಕ್ಷಿದಾರರ ಹೆಸರು | : ಶಿವಮಾದಯ್ಯ |
| ತಂದೆಯ ಹೆಸರು | : ಮಾದಯ್ಯ |
| ವಯಸ್ಸು | : 55 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ ಸ್ಥಳ | : ಬೀಚನಹಳ್ಳಿ |

ಸಾಕ್ಷಿಗೆ ದಿನಾಂಕಃ 03.10.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ

ಚಾಸಾ–1 ನನ್ನ ಮಗಳು. ಆರೋಪಿತರು ನನಗೆ ಗೊತ್ತು. 1ನೇ ಆರೋಪಿ ನನ್ನ ಅಳಿಯ, 2ನೇ ಆರೋಪಿ 1ನೇ ಆರೋಪಿಯ ತಂದೆ. ಚಾಸಾ–1 ಮತ್ತು 1ನೇ ಆರೋಪಿ ಮದುವೆ 2020 ರಲ್ಲಿ ಆಗಿರುತ್ತದೆ. ಮದುವೆಯ ಮಾತುಕತೆಯಲ್ಲಿ 1ನೇ ಆರೋಪಿಗೆ 1 ಉಂಗುರ, 4 ಜೊತೆ ಬಟ್ಟೆ ಕೊಡುವಂತೆ ತೀರ್ಮಾನ ಆಗಿತ್ತು. ಅದರಂತೆ ನಾನು 1ನೇ ಆರೋಪಿಗೆ 1 ಉಂಗುರ, 4 ಜೊತೆ ಬಟ್ಟೆ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತೇನೆ. ಮದುವೆಯಾದ 1 ವರ್ಷದವರೆಗೆ ಆರೋಪಿತರು ಚಾಸಾ–1 ರವರನ್ನು ಚೆನ್ನಾಗಿ ನೋಡಿಕೊಂಡರು. ನಂತರ ಆರೋಪಿತರು ಚಾಸಾ–1 ರವರಿಗೆ ತವರು ಮನೆಯಿಂದ ವರದಕ್ಷಿಣೆ ತಂದಿಲ್ಲ ಎಂದು ಆಗಾಗ ಬೈದು ಹಿಂಸೆ ನೀಡುತ್ತಿದ್ದರು.

ಆರೋಪಿತರು ಚಾಸಾ–1 ರವರಿಗೆ ಅಂಕಪಟ್ಟಿಗಳನ್ನು ಕೊಡು ಮತ್ತು ತಾಯಿ ಹೆಸರಿನಲ್ಲಿರುವ ಜಮೀನಿನಲ್ಲಿ ಭಾಗ ತೆಗೆದುಕೊಂಡು ಬಾ ಎಂದು ಹಿಂಸೆ ನೀಡುತ್ತಿದ್ದರು. 1ನೇ ಆರೋಪಿ ಕುಡಿದು ನಮ್ಮ ಮನೆಗೆ ಬಂದು ಹಣ ಕೊಡುವಂತೆ ಗಲಾಟೆ ಮಾಡುತ್ತಿದ್ದರು. ನಾನು, ಚಾಸಾ–4 ಹಾಗೂ 1ನೇ ಆರೋಪಿಯ ಅಕ್ಕ ಭಾವ ಸೇರಿ ಪಂಚಾಯಿತಿ ಮಾಡಿ 1ನೇ ಆರೋಪಿಗೆ ಬುದ್ಧಿ ಮಾತು ಹೇಳಿದ್ದರೂ ಸಹ ಆತ ಸರಿಹೋಗಲಿಲ್ಲ.

2022 ರಲ್ಲಿ 1ನೇ ಆರೋಪಿ ನಮ್ಮ ಮನೆಗೆ ಬಂದು ಚಾಸಾ–1 ರವರ ಜೊತೆ ಜಗಳ ಮಾಡುತ್ತಿದ್ದಾಗ ನಾನು ಜಗಳ ಮಾಡದಂತೆ ಬುದ್ಧಿ ಮಾತು ಹೇಳುವಾಗ 1ನೇ ಆರೋಪಿ ನನ್ನ ಕುತ್ತಿಗೆಯನ್ನು ಹಿಡಿದು ಎಳೆದಾಡುವಾಗ ನನ್ನ ಕತ್ತಿನಲ್ಲಿದ್ದ ದಾರ ಬಿಗಿಯಾಗಿ ನಾನು ಕೆಳಕ್ಕೆ ಬಿದ್ದುಹೋದೆ. ನಾನು ಕೆಳಕ್ಕೆ ಬಿದ್ದಾಗ 1ನೇ ಆರೋಪಿ ನನಗೆ ಕಾಲಿನಿಂದ ತುಳಿಯುತ್ತಿದ್ದನು. ಅಕ್ಕ ಪಕ್ಕದ ಮನೆಯವರು ಬಂದು ಜಗಳ ಬಿಡಿಸಿದರು. ನಂತರ ಈ ಬಗ್ಗೆ ಚಾಸಾ–1 ರವರು ದೂರು ನೀಡಿದರು. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಎಂ. ವಕೀಲರಿಂದಃ

ನನಗೆ ಮೂರು ಜನ ಮಕ್ಕಳು ಎಂದರೆ ಸರಿ. ಚಾಸಾ–1 ದೊಡ್ಡ ಮಗಳು. 2ನೇ ಮಗಳು ಬೆಂಗಳೂರಿನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದಾಳೆ. ನನ್ನ ಮಗ ದೈಹಿಕ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಚಾಸಾ–1 ರವರ ಮದುವೆಯಾದ ಸ್ವಲ್ಪ ದಿನಗಳಲ್ಲಿ ಕೋವಿಡ್ ಲಾಕ್ ಡೌನ್ ಆಗಿರುತ್ತದೆ ಎಂದರೆ ಸರಿ. ಕೋವಿಡ್ ಲಾಕ್ ಡೌನ್ ಸಡಿಲಿಕೆಯಾಗುವವರೆಗೂ ಚಾಸಾ–1 ಮತ್ತು 1ನೇ ಆರೋಪಿ ನಮ್ಮ

ಮನೆಯಲ್ಲಿದ್ದರು ಎಂದರೆ ಸರಿ. ಕೋವಿಡ್ ಲಾಕ್ ಡೌನ್ ಸಡಿಲಿಕೆಯಾದ 5-6 ತಿಂಗಳ ನಂತರ ಚಾಸಾ-1 ಮತ್ತು 1ನೇ ಆರೋಪಿ ಅವರ ಮನೆಗೆ ಹೋಗಿರುತ್ತಾರೆ ಎಂದರೆ ಸರಿ. 2 ತಿಂಗಳ ನಂತರ ಆರೋಪಿತರ ಮನೆಯಲ್ಲಿ ಚಾಸಾ-1 ರವರಿಗೆ ಸೀಮಂತ ಮಾಡಿ ನಮ್ಮ ಮನೆಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರನ್ನು ಹೆರಿಗೆಗಾಗಿ 1ನೇ ಆರೋಪಿಯೇ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಹೆರಿಗೆಯಾದ ನಂತರ ಚಾಸಾ-1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿ. ಚಾಸಾ-1 ರವರ ಹೆರಿಗೆ ಸಮಯದಲ್ಲಿ 1ನೇ ಆರೋಪಿ ಆಸ್ಪತ್ರೆಗೆ ಬಂದಿದ್ದರು ಎಂದರೆ ಸರಿ. 1 ವರ್ಷಗಳವರೆಗೆ ಚಾಸಾ-1 ರವರು ನಮ್ಮ ಮನೆಯಲ್ಲಿದ್ದು ಬಾಣಂತನ ಮುಗಿದ ನಂತರ ಆಕೆಯನ್ನು ಆರೋಪಿತರ ಮನೆಗೆ ಕಳುಹಿಸಿರುತ್ತೇವೆ ಎಂದರೆ ಸರಿ. ಚಾಸಾ-1 ರವರ ಜೊತೆ ಆರೋಪಿತರ ಮನೆಗೆ ಅಜ್ಜಿಯನ್ನೂ ಸಹ ಕಳುಹಿಸಿದ್ದೆ ಎಂದರೆ ಸಾಕ್ಷಿ 7-8 ಜನರನ್ನು ಕಳುಹಿಸಿದ್ದೆ ಎಂದು ನುಡಿಯುತ್ತಾರೆ. 5-6 ದಿನಗಳ ನಂತರ ಚಾಸಾ-1 ರವರು ನಮ್ಮ ಮನೆಗೆ ವಾಪಸ್ಸು ಬಂದಿರುತ್ತಾರೆ ಎಂದರೆ ಸರಿ.

ಮದುವೆಯಾದ ಸಮಯದಲ್ಲಿ ಮತ್ತು 5-6 ತಿಂಗಳು 1ನೇ ಆರೋಪಿ ನಮ್ಮ ಮನೆಯಲ್ಲಿ ಇದ್ದಾಗ ನನ್ನ ಜೊತೆ ಚೆನ್ನಾಗಿದ್ದರು ಎಂದರೆ ಸರಿ. ನಮ್ಮ ಮನೆಯಲ್ಲಿದ್ದಾಗ 1ನೇ ಆರೋಪಿ ನಮ್ಮ ಜಮೀನಿಗೆ ಬಂದು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಹಸು ಎತ್ತುಗಳು ಇವೆ ಎಂದರೆ ಸರಿಯಲ್ಲ. 1ನೇ ಆರೋಪಿ ನಮ್ಮ ಮನೆಯಲ್ಲಿದ್ದಾಗ ಹಸು ಎತ್ತುಗಳನ್ನು ನೋಡಿಕೊಂಡು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರನ್ನು ಮದುವೆ ಮಾಡಿಕೊಡುವ ಪೂರ್ವದಲ್ಲಿ 1ನೇ ಆರೋಪಿಯ ತಾಯಿ ಮೃತಪಟ್ಟಿದ್ದರು ಎಂದರೆ ಸರಿ. ಆರೋಪಿತರ ಮನೆಯಲ್ಲಿ ಆರೋಪಿತರು ಮತ್ತು 1ನೇ ಆರೋಪಿಯ ತಮ್ಮ ಮಾತ್ರ ಇದ್ದರು ಎಂದರೆ

ಸರಿ. ಆರೋಪಿತರ ಮನೆಯಲ್ಲಿ ಮನೆಯ ಜವಾಬ್ದಾರಿಯನ್ನು ಚಾಸಾ–1 ರವರೇ ನೋಡಿಕೊಳ್ಳಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಚಾಸಾ–1 ರವರು ಮದುವೆಯಾದ ನಂತರ 2 ತಿಂಗಳು ಮಾತ್ರ ಆರೋಪಿತರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಚಾಸಾ–1 ರವರನ್ನು ನಮ್ಮ ಮನೆಯಲ್ಲೇ ಇರಿಸಿಕೊಂಡಿದ್ದೆವು ಎಂದರೆ ಸರಿಯಲ್ಲ. ಚಾಸಾ–1 ರವರು ಈಗಲೂ ನಮ್ಮ ಮಾತನ್ನು ಕೇಳಿಕೊಂಡು ನಮ್ಮ ಮನೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ನಮ್ಮ ಮನೆಯಲ್ಲೇ ಇರಬೇಕೆಂದು ನಾನು ಹಠ ಮಾಡಿದ್ದರಿಂದ ಚಾಸಾ–1 ರವರು ಆರೋಪಿಯನ್ನು ಬಿಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹಠದಿಂದ ಚಾಸಾ–1 ರವರ ಜೀವನ ಹಾಳಾಗಿದೆ ಎಂದರೆ ಸರಿಯಲ್ಲ. ನನ್ನ ಇನ್ನಿಬ್ಬರು ಮಕ್ಕಳು ಬೇರೆ ಊರಿನಲ್ಲಿ ಕೆಲಸ ಮಾಡಿಕೊಂಡು ಇರುವುದರಿಂದ ಚಾಸಾ–1 ರವರನ್ನು ಆರೋಪಿತರ ಮನೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮನೆಯಲ್ಲಿ ಚಾಸಾ–1 ರವರು ಮಾತ್ರ ಮಹಿಳೆಯಾದ್ದರಿಂದ ಅವರಿಗೆ ಹೆಚ್ಚಿನ ಜವಾಬ್ದಾರಿ ಆಗುತ್ತದೆ ಎಂದು ನಾನು ಚಾಸಾ–1 ರವರನ್ನು ಆರೋಪಿತರ ಮನೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ.

1ನೇ ಆರೋಪಿ ನನ್ನ ಜೊತೆ ಜಗಳ ಮಾಡಿ ಹಲ್ಲೆ ಮಾಡಿದ ದಿನದಂದು ದೂರು ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಪೊಲೀಸರು ನಮ್ಮನ್ನು ಠಾಣೆಗೆ ಬರಲು ಹೇಳಿ ದೂರು ನೀಡದಂತೆ ಬುದ್ಧಿ ಮಾತು ಹೇಳಿದರು ಎಂದು ನುಡಿಯುತ್ತಾರೆ. 1ನೇ ಆರೋಪಿ ಕಾಲಿನಿಂದ ನನ್ನ ತೊಡೆಗೆ ಒದ್ದಿರುತ್ತಾನೆ, ಕೈಯಿಂದ ತಲೆಗೆ ಹೊಡೆದಿರುತ್ತಾನೆ. ಈ ಸಂಬಂಧ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಮತ್ತು ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ. ಚಾಸಾ–1 ರವರು ದೂರು ನೀಡುವಾಗ ನಾನು ಸಹ ಪೊಲೀಸ್ ಠಾಣೆಗೆ ಹೋಗಿದ್ದೆ. ಆ ದಿನ ಬಿಟ್ಟು ಮತ್ತೇ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ನನ್ನನ್ನು ಬಿಟ್ಟು ಇನ್ನಿತರ ಸಾಕ್ಷಿದಾರರು ಪೊಲೀಸ್ ಠಾಣೆಗೆ

ಬಂದಿಲ್ಲ. ಚಾಸಾ–1 ರವರು ಯಾವ ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾನು ಪೊಲೀಸರಿಗೆ ನನ್ನ ಕತ್ತಿನ ದಾರವನ್ನು ನೀಡಿಲ್ಲ. ನಾನು ಹೇಳುವಂತೆ 1ನೇ ಆರೋಪಿ ನಮ್ಮ ಮನೆಗೆ ಬಂದಿಲ್ಲ, ಗಲಾಟೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಆರೋಪಿತರು ಚಾಸಾ–1 ರವರಿಗೆ ವರದಕ್ಷಿಣೆ ತರುವಂತೆ ಮಾನಸಿಕ ಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ನನಗೆ ಹಲ್ಲೆ ಮಾಡಿದ್ದರೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಅಕ್ಕ ಭಾವ ನಮ್ಮ ಮನೆಗೆ ಬಂದು ಚಾಸಾ–1 ರವರನ್ನು ಆರೋಪಿತರ ಮನೆಗೆ ಕಳುಹಿಸುವಂತೆ ಕೇಳಿಕೊಂಡರೂ ಸಹ ನಾನು ಚಾಸಾ–1 ರವರನ್ನು ಆರೋಪಿತರ ಮನೆಗೆ ಕಳುಹಿಸಿಲ್ಲ ಮತ್ತು 1ನೇ ಆರೋಪಿಯ ಅಕ್ಕ ಭಾವನಿಗೆ ಬೈದು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

ಮದುವೆಯ ಸಮಯದಲ್ಲಿ ಉಂಗುರ ಮತ್ತು ಬಟ್ಟೆಗಳನ್ನು ಕೊಟ್ಟಿರುವ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುವ ಸಮಯದಲ್ಲಿ ತಿಳಿಸಿರುತ್ತೇನೆ. ಆ ರೀತಿ ಹೇಳಿಕೆ ನೀಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ–1 ರವರಿಗೆ ವರದಕ್ಷಿಣೆ ತೆಗೆದುಕೊಂಡು ಬಾ ಮತ್ತು ಅಂಕಪಟ್ಟಿಗಳನ್ನು ತೆಗೆದುಕೊಂಡು ಬಾ ಎಂದು ನನ್ನ ಮುಂದೆ ಹೇಳಿರುತ್ತಾರೆ. ಸದರಿ ಮಾತನ್ನು ಯಾವ ದಿನ ಹೇಳಿದರು ಎಂದು ನನಗೆ ನೆನಪಿಲ್ಲ. ಜಮೀನಿನ ಪಹಣಿ ಪತ್ರಿಕೆಯನ್ನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿ. 1ನೇ ಆರೋಪಿ ಚಾಸಾ–1 ರವರಿಗೆ ವರದಕ್ಷಿಣೆ ತೆಗೆದುಕೊಂಡು ಬಾ ಮತ್ತು ಅಂಕಪಟ್ಟಿಗಳನ್ನು ತೆಗೆದುಕೊಂಡು ಬಾ ಎಂದು ಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ಅಕ್ಕ, ಭಾವ ಹಾಗೂ ಊರಿನವರು ಚಾಸಾ–1 ರವರನ್ನು ಆರೋಪಿತರ ಮನೆಗೆ ಕಳುಹಿಸುವಂತೆ ನನಗೆ ಬುದ್ಧಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ

ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರನ್ನು ಆರೋಪಿತರ ಮನೆಗೆ ಕಳುಹಿಸಲು ನನಗೆ ಇಷ್ಟವಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರನ್ನು ನಮ್ಮ ಮನೆಯಲ್ಲಿ ಇರಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ನಾನು ಆರೋಪಿತರ ಮೇಲೆ ಚಾಸಾ–1 ರವರ ಮೂಲಕ ಸುಳ್ಳು ದೂರು ಕೊಡಿಸಿ ನಾನು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ವರದಕ್ಷಿಣೆ ತರುವಂತೆ ಚಾಸಾ–1 ರವರಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಹಲ್ಲೆ ಮಾಡಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಚಾಮರಾಜನಗರ.

**ಅಪರ ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಾಮರಾಜನಗರ.**

**ಸಿ.ಸಿ. ನಂ. 268/2023**

**ಚಾಸಾ–3      ಪ್ರಾಸಾ–3**

| | |
|---|---|
| ಸಾಕ್ಷಿದಾರರ ಹೆಸರು | : ರಾಜೇಶ್ವರಿ |
| ಗಂಡನ ಹೆಸರು | : ಶಿವಮಾದಯ್ಯ |
| ವಯಸ್ಸು | : 45 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ ಸ್ಥಳ | : ಬೀಚನಹಳ್ಳಿ |

ಸಾಕ್ಷಿಗೆ ದಿನಾಂಕಃ 03.10.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ

ಚಾಸಾ–1 ನನ್ನ ಮಗಳು.  ಆರೋಪಿತರು ನನಗೆ ಗೊತ್ತು.  1ನೇ ಆರೋಪಿ ನನ್ನ ಅಳಿಯ, 2ನೇ ಆರೋಪಿ 1ನೇ ಆರೋಪಿಯ ತಂದೆ.  ಚಾಸಾ–1 ಮತ್ತು 1ನೇ ಆರೋಪಿ ಮದುವೆ 4 ವರ್ಷಗಳ ಹಿಂದೆ ಆಗಿರುತ್ತದೆ.  ಮದುವೆಯ ಮಾತುಕತೆಯಲ್ಲಿ 1ನೇ ಆರೋಪಿಗೆ 1 ಉಂಗುರ, 4 ಜೊತೆ ಬಟ್ಟೆ ಕೊಡುವಂತೆ ತೀರ್ಮಾನ ಆಗಿತ್ತು. ಅದರಂತೆ ನಾವು 1ನೇ ಆರೋಪಿಗೆ 1 ಉಂಗುರ, 4 ಜೊತೆ ಬಟ್ಟೆ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತೇವೆ.  ಮದುವೆಯಾದ 6 ತಿಂಗಳವರೆಗೆ ಆರೋಪಿತರು ಚಾಸಾ–1 ರವರನ್ನು ಚೆನ್ನಾಗಿ ನೋಡಿಕೊಂಡರು.   ನಂತರ ಆರೋಪಿತರು ಚಾಸಾ–1 ರವರಿಗೆ ತವರು ಮನೆಯಿಂದ ವರದಕ್ಷಿಣೆ ತಂದಿಲ್ಲ ಎಂದು ಆಗಾಗ ಬೈದು ಹಿಂಸೆ ನೀಡುತ್ತಿದ್ದರು.

1ನೇ ಆರೋಪಿ ಚಾಸಾ-1 ರವರ ಮೇಲೆ ಅನುಮಾನ ಪಡುತ್ತಿದ್ದರು. ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡುತ್ತಿದ್ದರು. ನಂತರ ಈ ಬಗ್ಗೆ ಪಂಚಾಯಿತಿ ಮಾಡಿದರೂ ಸಹ ಆರೋಪಿತರು ಸರಿ ಹೋಗಲಿಲ್ಲ. 1ನೇ ಆರೋಪಿ ನಮ್ಮ ಮನೆಗೆ ಬಂದು ನನಗೆ, ಚಾಸಾ-1 ಮತ್ತು 2 ರವರಿಗೆ ಹಲ್ಲೆ ಮಾಡಿದನು. ನಂತರ ಈ ಬಗ್ಗೆ ಚಾಸಾ-1 ರವರು ದೂರು ನೀಡಿದರು. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಎಂ. ವಕೀಲರಿಂದಃ</u>

ನಮ್ಮ ಮನೆಯಲ್ಲಿ ಚಾಸಾ-2 ರವರೇ ಎಲ್ಲಾ ವಿಚಾರದಲ್ಲೂ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಚಾಸಾ-2 ರವರ ಇಷ್ಟದ ಪ್ರಕಾರ ಚಾಸಾ-1 ರವರ ಮದುವೆ ಮಾಡಿರುತ್ತೇವೆ ಎಂದರೆ ಸರಿ. ಮದುವೆಯಾದ ನಂತರ 6 ತಿಂಗಳು ಮಾತ್ರ ಆರೋಪಿತರು ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಂಡರು ಎಂದು ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಚಾಸಾ-2 ರವರು ಬೇರೆಯವರ 2 ½ ಎಕರೆ ಜಮೀನನ್ನು ಗುತ್ತಿಗೆಗೆ ಮಾಡುತ್ತಾರೆ. ನಮ್ಮ ಮನೆಯಲ್ಲಿ ಧನ ಕರುಗಳು ಇರುತ್ತವೆ ಎಂದರೆ ಸರಿಯಲ್ಲ. ನನಗಾಗಲೀ, ಚಾಸಾ-2 ರವರಿಗಾಗಲೀ ಸ್ವಂತ ಜಮೀನು ಇಲ್ಲ ಎಂದರೆ ಸರಿ. ಕೋವಿಡ್ ಲಾಕ್ ಡೌನ್ ಸಡಿಲಿಕೆಯಾಗುವವರೆಗೂ ಚಾಸಾ-1 ಮತ್ತು 1ನೇ ಆರೋಪಿ ನಮ್ಮ ಮನೆಯಲ್ಲಿದ್ದರು ಎಂದರೆ ಸರಿ. ಕೋವಿಡ್ ಲಾಕ್ ಡೌನ್ ಸಡಿಲಿಕೆಯಾದ 5-6 ತಿಂಗಳ ನಂತರ ಚಾಸಾ-1 ಮತ್ತು 1ನೇ ಆರೋಪಿ ಅವರ ಮನೆಗೆ ಹೋಗಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ-1 ರವರು 6 ತಿಂಗಳ ಗರ್ಭಿಣಿಯಾಗಿದ್ದರು ಎಂದರೆ ಸರಿ. 2 ತಿಂಗಳ ನಂತರ ಆರೋಪಿತರ ಮನೆಯಲ್ಲಿ ಚಾಸಾ-1 ರವರಿಗೆ ಸೀಮಂತ ಮಾಡಿ ನಮ್ಮ ಮನೆಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರು ಚಾಸಾ-1ರವನ್ನು ಚೆನ್ನಾಗಿ

ನೋಡಿಕೊಂಡಿದ್ದರು ಎಂದರೆ ಸರಿ. ಚಾಸಾ–1 ರವರ ಹೆರಿಗೆ ಸಮಯದಲ್ಲಿ 1ನೇ ಆರೋಪಿ ಆಸ್ಪತ್ರೆಯಲ್ಲಿ 5 ದಿನ ಇದ್ದರು ಎಂದರೆ ಸರಿ. ಆರೋಪಿತರು ಚಾಸಾ–1 ರವರಿಗೆ ವರದಕ್ಷಿಣೆ ತರುವಂತೆ ಯಾವ ದಿನ ಹೇಳಿದರು ಎಂಬುದು ನನಗೆ ನೆನಪಿಲ್ಲ. 1ನೇ ಆರೋಪಿ ಚಾಸಾ–1 ರವರ ಮೇಲೆ ಅನುಮಾನ ಪಟ್ಟ ದಿನ ಯಾವುದು ಎಂದು ನನಗೆ ಹೇಳಲು ಬರುವುದಿಲ್ಲ. ಚಾಸಾ–1 ರವರಿಗೆ ಯಾರ ಜೊತೆ ಅಕ್ರಮ ಸಂಬಂಧ ಇದೆ ಎಂದು 1ನೇ ಆರೋಪಿ ನನ್ನ ಎದುರಿನಲ್ಲಿ ಚಾಸಾ–1 ರವರಿಗೆ ಬೈದಿಲ್ಲ. 1ನೇ ಆರೋಪಿ ನಮ್ಮ ಮನೆಗೆ ಬಂದು ಗಲಾಟೆ ಮಾಡಿದಾಗ ನನ್ನ ತೊಡೆಗೆ ಗಾಯವಾಗಿರುತ್ತದೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಈ ವಿಚಾರಗಳನ್ನು ಪೊಲೀಸರ ಮುಂದೆ ತಿಳಿಸಿರುತ್ತೇನೆ. ನಾನು ಹೇಳುವ ಹಾಗೇ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಇನ್ನಿಬ್ಬರು ಮಕ್ಕಳು ಕೆಲಸ ಮಾಡಿಕೊಂಡು ಬೇರೆ ಊರಿನಲ್ಲಿ ಇದ್ದಾರೆ ಎಂದರೆ ಸರಿ. 1ನೇ ಆರೋಪಿ ನಮ್ಮ ಮನೆಯಲ್ಲೇ ಇರಬೇಕೆಂದು ನಾವು ಹಠ ಮಾಡಿದ್ದರಿಂದ ಚಾಸಾ–1 ರವರು ಆರೋಪಿಯನ್ನು ಬಿಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ–2 ರವರ ಹಠದಿಂದ ಚಾಸಾ–1 ರವರ ಜೀವನ ಹಾಳಾಗಿದೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಅಕ್ಕ ಭಾವ ಮತ್ತು 2ನೇ ಆರೋಪಿ ನಮ್ಮ ಮನೆಗೆ ಬಂದು ಚಾಸಾ–1 ರವರನ್ನು ಆರೋಪಿತರ ಮನೆಗೆ ಕಳುಹಿಸುವಂತೆ ಕೇಳಿಕೊಂಡರು ಎಂದರೆ ಸರಿ. ಆದರೂ ಸಹ ಚಾಸಾ–2 ರವರು ಅವರಿಗೆ ಮರ್ಯಾದೆ ಕೊಡದೆ ಬೈದು ಕಳುಹಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರ ಮನೆಯಲ್ಲಿ ಚಾಸಾ–1 ರವರು ಮಾತ್ರ ಮಹಿಳೆಯಾದ್ದರಿಂದ ಅವರಿಗೆ ಹೆಚ್ಚಿನ ಜವಾಬ್ದಾರಿ ಆಗುತ್ತದೆ ಎಂದು ನಾವು ಚಾಸಾ–1 ರವರನ್ನು ಆರೋಪಿತರ ಮನೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ.

ನಾನು ಹೇಳುವಂತೆ 1ನೇ ಆರೋಪಿ ನಮ್ಮ ಮನೆಗೆ ಬಂದಿಲ್ಲ, ಗಲಾಟೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಆರೋಪಿತರು ಚಾಸಾ-1 ರವರಿಗೆ ವರದಕ್ಷಿಣೆ ತರುವಂತೆ ಮಾನಸಿಕ ಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-1 ರವರಿಗೆ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರನ್ನು ಆರೋಪಿತರ ಮನೆಗೆ ಕಳುಹಿಸಲು ಚಾಸಾ-2 ಇಷ್ಟವಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಚಾಮರಾಜನಗರ.